# ಅಂತಾರಾಷ್ಟ್ರೀಯ ರಂಗಸಂದೇಶ ೨೦೧೧



## ಮನುಕುಲದ ಸೇವೆಯಲ್ಲಿ ರಂಗಭೂಮಿ

**ಜೆಸ್ಸಿಕಾ ಎ ಕ್ವಾವಾ (ಉಗಾಂಡ)**

ಸಮಾಜಗಳನ್ನು ಸಂಘಟಿಸಿ ಒಗ್ಗೂಡಿಸುವಲ್ಲಿ ರಂಗಭೂಮಿಯ ಅಗಾಧ ಸಾಮರ್ಥ್ಯವನ್ನು ನಿಜವಾಗಿ ಬಿಂಬಿಸುವಂತಿದೆ ಇಂದಿನ ಸಭೆ.

ರಂಗಭೂಮಿ ಶಾಂತಿ ಹಾಗು ಸಮನ್ವಯದ ಪ್ರಬಲ ಸಾಧನವಾಗಬಹುದೆಂಬ ಕಲ್ಪನೆ ನಿಮಗೆಂದಾದರೂ ಬಂದಿದೆಯೇ ? ಜಗತ್ತಿನ ಹಿಂಸಾತ್ಮಕ ಘರ್ಷಣೆ ಪ್ರದೇಶಗಳಲ್ಲಿ ಶಾಂತಿ ಕಾಪಾಡುವ ಕಾರ್ಯಗಳಿಗೆ ದೇಶಗಳು ಬೃಹತ್ ಪ್ರಮಾಣದಲ್ಲಿ ಹಣ ವ್ಯಯಿಸುತ್ತಿರುವಾಗ ಅಂತಹ ಸನ್ನಿವೇಶದ ಪರಿವರ್ತನೆ ಹಾಗು ನಿರ್ವಹಣೆಗಾಗಿ ಪರ್ಯಾಯ ಸಾಧನವಾಗಬಲ್ಲ ರಂಗಭೂಮಿಯ ಮೇಲೆ ಹರಿಸಿರುವ ಗಮನ ತೀರಾ ಕಡಿಮೆ. ಪ್ರಯೋಗಿಸುವ ಸಾಧನಗಳು ಬಾಹ್ಯ ಹಾಗು ದಮನಗೊಳಿಸುವ ಶಕ್ತಿಯಿಂದ ಬಂದಿರುವಾಗ, ವಿಶ್ವಶಾಂತಿಯನ್ನು ತಾಯಿನೆಲದ ನಾಗರೀಕರು ಹೇಗೆ ತಾನೆ ಸಾಧಿಸಬಲ್ಲರು?

ಭಯ ಹಾಗು ಸಂಶಯದ ಸುಳಿಯಲ್ಲಿ ಸಿಕ್ಕಿಕೊಂಡಿರುವ ಆತ್ಮವನ್ನು ರಂಗಭೂಮಿ ಸೂಕ್ಷ್ಮವಾಗಿ ಭೇದಿಸಿ, ಪರಿವರ್ತಿಸಿ ವ್ಯಕ್ತಿ ಹಾಗು ಮಾನವ ಸಮುದಾಯದ ಎದುರು ಪರ್ಯಾಯ ಜಗತನ್ನೇ ತೆರೆದಿಡುತ್ತದೆ. ಅನಿಶ್ಚಿತ ಭವಿಷ್ಯದ ನಿರೀಕ್ಷೆಯಲ್ಲೇ ನಿತ್ಯಸತ್ಯಗಳಿಗೆ ಅರ್ಥವನ್ನು ಕೊಡಬಲ್ಲದು, ಮಾನವನ ಸ್ಥಿತಿಗತಿಗಳ ರಾಜಕಾರಣದಲ್ಲಿ ಸರಳ ಹಾಗು ನೇರವಾಗಿ ತೊಡಗಬಲ್ಲದು ರಂಗಭೂಮಿ. ಇದು ಸಮಗ್ರವಾಗಿರುವ ಕಾರಣ ಹಿಂದಿನ ತಪ್ಪು ಗ್ರಹಿಕೆಗಳನ್ನು ಮೀರಿ ನಿಲ್ಲುವ ಅನುಭವವನ್ನು ತೋರಬಲ್ಲದು.

ಜೊತೆಗೆ ನಮ್ಮಲಿರುವ ಸಾಮೂಹಿಕ ಮನೋಭಾವನೆಗಳನ್ನು ಪ್ರತಿಪಾದಿಸಿ ಮುನ್ನಡೆಸುವ ಹಾಗು ಅವುಗಳನ್ನು ಉಲ್ಲಂಘಿಸಿದಾಗ ಹೋರಾಡುವ ಸಪ್ರಮಾಣ ಸಾಧನ ರಂಗಭೂಮಿ.

ಶಾಂತಿಯುತ ಭವಿಷ್ಯ ನಿರೀಕ್ಷಿಸಲು ಪ್ರತಿಯೊಬ್ಬ ವ್ಯಕ್ತಿಯ ಕೊಡುಗೆಯನ್ನು ಅರ್ಥೈಸಿ ಗುರುತಿಸಿ ಗೌರವಿಸುವ ಶಾಂತಿಯುತ ಸಾಧನೆಗಳನ್ನು ಬಳಸಲು ಆರಂಭಿಸಬೇಕು. ಶಾಂತಿ ಹಾಗು ಸಮನ್ವಯದ ಧ್ಯೇಯ ಸಂದೇಶಗಳನ್ನು ರವಾನಿಸುವ ಸಾರ್ವತ್ರಿಕ ಭಾಷೆಯೆಂದರೆ ರಂಗಭೂಮಿ.

ರಂಗಭೂಮಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದ ಹಿಂದಿನ ತಪ್ಪು ಗ್ರಹಿಕೆಗಳನ್ನು ದೂರಮಾಡಿ, ಹಾಗೆಯೇ ಪರಿಶೋಧಿಸಿದ ಜ್ಞಾನ ಹಾಗು ವಾಸ್ತವತೆಯ ಆಧಾರದ ಮೇಲೆ ವ್ಯಕ್ತಿಗೆ ಪುನರ್ಜನ್ಮದ ಆಯ್ಕೆಯ ಅವಕಾಶ ನೀಡುತ್ತದೆ. ಅನ್ಯ ಕಲಾಪ್ರಕಾರಗಳ ನಡುವೆ ರಂಗಭೂಮಿ ಉದ್ಧಾರವಾಗಬೇಕಾದರೆ ನಿತ್ಯಜೀವನದ ಘರ್ಷಣೆ ಹಾಗು ಶಾಂತಿಯ ವಿಷಮ ಪರಿಸ್ಥಿತಿಗಳನ್ನು ವ್ಯವಹರಿಸುವ ಸಂದರ್ಭಗಳಲ್ಲಿ ಅದನ್ನು ಅಳವಡಿಸಿಕೊಳ್ಳುವ ದಿಟ್ಟಹೆಜ್ಜೆ ಇಡಬೇಕಾಗುತ್ತದೆ,

ಸಮಾಜಿಕ ಪರಿವರ್ತನೆ ಹಾಗು ಸುಧಾರಣೆಯ ನಿಟ್ಟಿನಲ್ಲಿ ರಂಗಭೂಮಿ ಈಗಾಗಲೇ ಯುದ್ಧಪೀಡಿತ ಪ್ರದೇಶಗಳಲ್ಲಿ ಹಾಗು ಕಡು ಬಡತನ, ರೋಗಗ್ರಸ್ತ ಸಮುದಾಯಗಳಲ್ಲಿ ತನ್ನ ಅಸ್ತಿತ್ವ ಕಂಡುಕೊಂಡಿದೆ. ಸಮಾಜವನ್ನು ಒಗ್ಗೂಡಿಸಿ ಅರಿವು ಮೂಡಿಸುವ ನಿಟ್ಟಿನಲ್ಲಿ, ಯುದ್ಧ ನಂತರ ಸಂಕಷ್ಟಗಳ ಪರಿಹಾರ ಕಾರ್ಯಗಳಲ್ಲಿ ರಂಗಭೂಮಿಯ ಯಶಸ್ಸಿನ ಅನೇಕ ಕಥೆಗಳು ದಿನೇ ದಿನೇ ಹೆಚ್ಚುತ್ತಿವೆ. " ಮಾನವ ಸಮುದಾಯಗಳ ನಡುವೆ ಶಾಂತಿ ಹಾಗು ಸೌಹಾರ್ದ ಬಲಗೊಳಿಸುವ" ನಿಟ್ಟಿನಲ್ಲಿ "ಅಂತಾರಾಷ್ಟ್ರೀಯ ರಂಗಸಂಸ್ಥೆ" ಯಂತಹ ಜಾಗತಿಕ ಸಾಂಸ್ಕೃತಿಕ ವೇದಿಕೆಗಳು ಈಗಾಗಲೇ ನೆಲೆಯೂರಿವೆ.

ಆದ್ದರಿಂದ ಈ ದಿನಗಳಲ್ಲಿ ರಂಗಭೂಮಿ ಸಾಮರ್ಥ್ಯದ ಅರಿವಿದ್ದರೂ ಗನ್ನು ಹಿಡಿದವರಿಗೆ, ಬಾಂಬ್ ಎಸೆಯುವವರಿಗೆ ಶಾಂತಿಯನ್ನು ಕಾಪಾಡುವ ಜವಾಬ್ದಾರಿಯನ್ನು ನೀಡಿ ಸುಮ್ಮನಿರುವುದು ನಗೆಪಾಟಲಾದೀತು. ಪರಕೀಯ ವಂಚಕರಿಂದ ಶಾಂತಿ ಸಮನ್ವಯ ಸಾಧಿಸಲು ಶಕ್ಯವೇ?

ಇಂದಿನ ಅಂತಾರಾಷ್ಟ್ರೀಯ ರಂಗಭೂಮಿ ದಿನಾಚರಣೆಯಂದು ಪರಸ್ಪರ ಸಂಭಾಷಣೆ ಸಮನ್ವಯ ಸಾಮಾಜಿಕ ಪರಿವರ್ತನೆ ಹಾಗು ಸುಧಾರಣೆಯ ಸಾರ್ವತ್ರಿಕ ಸಾಧನವನ್ನಾಗಿ ರಂಗಭೂಮಿಯನ್ನು ಪರಿಗಣಿಸಿ ಪರ್ಯಾಲೋಚಿಸುವಂತೆ ಸೂಚಿಸುತ್ತೇನೆ. ಶಾಂತಿ ಸಾಧನೆಯ ಕಾರ್ಯ ತಂತ್ರಗಳಿಗಾಗಿ ಯುನೈಟೆಡ್ ನೇಷನ್ಸ್ ಬೃಹತ್ ಪ್ರಮಾಣದ ಶಸ್ತ್ರಾಸ್ತ್ರಗಳ ಖರೀದಿಗೆ ಅಗಾಧ ಹಣ ವ್ಯಯಿಸುತ್ತಿರುವಾಗ ರಂಗಭೂಮಿ ಅದಕ್ಕಿಂತಲೂ ಸ್ವಾಭಾವಿಕ ಮಾನವೀಯ ದುಬಾರಿಯಲ್ಲದ ಪ್ರಭಾವಿ ಪರ್ಯಾಯ ಸಾಧನವಾಗಿದೆ.

ಶಾಂತಿ ನೆಲೆಸಲು ಅದೊಂದು ಉತ್ತರವಲ್ಲದಿದ್ದರೂ ರಂಗಭೂಮಿಯನ್ನು ಶಾಂತಿ ಕಾಪಾಡುವ ಪರಿಣಾಮಕಾರಿ ಸಾಧನವನ್ನಾಗಿ ಬಳಸಬೇಕು.

---------

**ಜೆಸ್ಸಿಕಾ ಎ ಕ್ವಾವಾ ಕಿರುಪರಿಚಯ :** ನಿರ್ದೇಶಕಿ, ನಟಿ, ನಾಟಕಗಾರ್ತಿ, ರಂಗತಜ್ಞೆಯಾಗಿರುವ ಈಕೆ ಪರೋಪಕಾರಿ ಕೆಲಸಗಳಿಂದ ಅಂತಾರಾಷ್ಟ್ರೀಯಮಟ್ಟದಲ್ಲಿ ಗೌರವಕ್ಕೆ ಪಾತ್ರರಾಗಿದ್ದಾರೆ. ಈಕೆ ರಂಗಭೂಮಿ, ದೂರದರ್ಶನ ಹಾಗು ಬಾನುಲಿಗಾಗಿ ೧೫ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ " ಕಾರ್ನರ್ ಸ್ಟೋನ್", " ಡಾಗ್ ಬೈಟ್ ಜಸ್ಟೀಸ್", "ಪ್ಯಾರಡೈಸ್ ಫಾರ್ ಎವರ್", "ಎಕೋಸ್ ಆಫ್ ಪೀಸ್" ಮತ್ತು "ಡ್ರಮ್ಸ್ ಆಫ್ ಫ್ರೀಡಮ್" ಇತ್ಯಾದಿ ಪ್ರಮುಖವಾದುದು. ಮಾನವ ಹಕ್ಕುಗಳ ಪ್ರಬಲ ಪ್ರತಿಪಾದಕಿಯಾಗಿ ಲಿಂಗತಾರತಮ್ಯ ಹಾಗು ಶಾಂತಿಗಾಗಿ ದನಿಯೆತ್ತಿದ್ದಾರೆ. ರಾಷ್ಟ್ರೀಯ ಹಾಗು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಂಗಭೂಮಿಯ ಎಲ್ಲಾ ಆಯಾಮಗಳನ್ನೂ ಅಭಿವೃದ್ಧಿ ಹಾಗು ಸಂಶೋಧನೆಗಾಗಿ ಬಳಸಿಕೊಂಡಿದ್ದಾರೆ. ಪ್ರಸ್ತುತ ಈಕೆ ಉಗಾಂಡದ ಮಾಕೆರೆರೆ ವಿಶ್ವವಿದ್ಯಾನಿಲಯದ ಸಂಗೀತ ನೃತ್ಯ ನಾಟಕ ವಿಭಾಗದ ಹಿರಿಯ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

----------------------

* ಸರಳಾನುವಾದ : ಶ್ರೀಕಂಠ ಗುಂಡಪ್ಪ, ಹಿರಿಯ ರಂಗಕರ್ಮಿ,

**ಸಂ ೫೭, ಈಶಾನ್ಯ, ಬ್ಯಾಂಕ್ ಕಾಲೋನಿ, ಬೋಗಾದಿ, ಮೈಸೂರು. ಮೊ +೯೧ ೯೪೮೬೦೦೬೬೨೫**

*ವಿ.ಸೂ: ಮಾರ್ಚ್ ೨೭ ರಂದು ನಡೆಯಲಿರುವ ರಂಗ ಚಟುವಟಿಕೆಗಳ ಕಾರ್ಯಕ್ರಮಕ್ಕೆ ಮೊದಲು ಈ ಸಂದೇಶ ವಾಚನ ಅಪೇಕ್ಷಣೀಯ.*